**<u>ದಿಃ 07.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ.ಎ.ಎ.ಕೆ ವಕೀಲರಿಂದಃ ವಾದಿಯ ಪರವಾಗಿಃ</u>**

13) ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಬರೆಯಲು ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ಈ ಪ್ರಕರಣದಲ್ಲಿ ಮೊದಲು ನಮ್ಮ ತಂದೆಯಾದಂತಹ ಮಹ್ಮದಯೂಸೂಫ ಇವರು ಪ್ರತಿವಾದ ಪತ್ರ ಸಲ್ಲಿಸಿದ್ದರು ಅಂದರೆ ಸರಿ. ಜಮಾಲಸಾಬ ನನಗೆ ಅಜ್ಜನಾಗಬೇಕು, ಅವರಿಗೆ ಇಬ್ಬರೂ ಮಕ್ಕಳು ಇರುತ್ತಾರೆ, ಅದರಲ್ಲಿ ಹಿರಿಯ ಮಗ ಮಹಮ್ಮದಯೂಸೂಫ ಅಂತಾ ಇರುತ್ತಾರೆ, ಕಿರಿಯ ಮಗ ಅಬ್ದುಲ್‌ವಹಾಬ ಅಂತಾ ಇರುತ್ತಾರೆ. ಜಮಾಲಸಾಬ ಈತನು ಯಾವ ಇಸ್ವಿಯಲ್ಲಿ ಮೃತಪಟ್ಟಿರುತ್ತಾರೆ ಎಂದು ನನಗೆ ನೆನಪಿರುವದಿಲ್ಲ. ಜಮಾಲಸಾಬ ಈತನು ಒಂದು ಸಣ್ಣ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದನು. ಜಮಾಲಸಾಬ ಈತನ ಹೆಸರಿನಲ್ಲಿ ಮೊದಲಿಗೆ ಯಾವುದೇ ಆಸ್ತಿ ಇರಲಿಲ್ಲ ಅಂದರೆ ಸರಿ. ಜಮಾಲಸಾಬ ಈತನು ಮೃತಪಟ್ಟ ನಂತರ ಅಬ್ದುಲ್ ವಹಾಬ ಮತ್ತು ಮಹಮ್ಮದ ಯೂಸೂಫ ಇಬ್ಬರೂ ಸೇರಿ ವ್ಯಾಪಾರ ಮಾಡುತ್ತಿದ್ದರು ಅಂದರೆ ಸರಿ. ಮಹಮ್ಮದಯೂಸೂಫ ಆತನ ಜೀವಿತ ಕಾಲದಲ್ಲಿ ಆತನೇ ತನ್ನ ವ್ಯವಹಾರಗಳನ್ನು ನೋಡಿಕೊಂಡು ಹೋಗುತ್ತಿದ್ದ ಅಂದರೆ ಸರಿಯಲ್ಲ, ಮಹಮ್ಮದಯೂಸೂಫ ಮತ್ತು ಅಬ್ದುಲ್‌ವಹಾಬ ಇಬ್ಬರೂ ಸೇರಿ ಎಲ್ಲ ವ್ಯವಹಾರ ಮಾಡುತ್ತಿದ್ದರು. ಒಟ್ಟು ಕುಟುಂಬದಲ್ಲಿ ಮೊದಲಿಗೆ ಅಬ್ದುಲ್ ವಹಾಬ ಮತ್ತು ಮಹಮ್ಮದಯೂಸೂಫ ಇಬ್ಬರೇ ಇದ್ದರು ಅಂದರೆ ಸರಿ.

14) ಮೊದಲಿಗೆ ಅಬ್ದುಲ್‌ವಹಾಬ ಮತ್ತು ಮಹಮ್ಮದಯೂಸೂಫ ಇಬ್ಬರು ಸೇರಿ ನೊಂದಣಿಯಾದಂತಹ ಒಂದು ಫರ್ಮ ಇತ್ತು, ಸದರಿ ನೊಂದಣಿ ಪತ್ರವನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವದಿಲ್ಲ. ನಮ್ಮ ಪಟವೇಗಾರ ಕುಟುಂಬದಲ್ಲಿ ಯಾವುದೇ ರೀತಿ ನೊಂದಣಿಯಾದಂತಹ ಫರಂ

ಇರುವದಿಲ್ಲ, ಆದರೂ ಸಹ ಆ ಕುರಿತಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**15)** ಎ.ಜೆ.ಪಟವೇಗಾರ ಎನ್ನುವ ನೊಂದಣಿಯಾದಂತಹ ಫರಂ ಅಬ್ದುಲ್‌ವಹಾಬ ಈತನ ಒಬ್ಬನ ಹೆಸರಿನಲ್ಲಿ ಇತ್ತು ಅಂದರೆ ಸರಿ. ಆದರೆ ಅಬ್ದುಲ್‌ವಹಾಬ ಮತ್ತು ಮಹಮ್ಮದ ಯೂಸೂಫ ಇಬ್ಬರ ನಡುವೆ ಯಾವುದೇ ರೀತಿ ಪಾರ್ಟನರ ಶಿಪ ವ್ಯವಹಾರ ಇರಲಿಲ್ಲ, ಆದರೂ ಇಬ್ಬರೂ ಸೇರಿ ವ್ಯವಹಾರ ಮಾಡುತ್ತಿದ್ದರು. ಪಟವೇಗಾರ ಇವರ ವ್ಯಾಪಾರದ ಸಂಬಂದವಾಗಿ ಒಂದು ಬ್ಯಾಂಕ ಖಾತೆ ಇತ್ತು, ಆದರೆ ಸದರಿ ಬ್ಯಾಂಕ ಖಾತೆಯನ್ನು ನಾನು ನೋಡಿರುವದಿಲ್ಲ. ಅಬ್ದುಲವಹಾಬ ಮತ್ತು ಮಹಮ್ಮದಯೂಸೂಫ ಇಬ್ಬರ ನಡುವೆ ಯಾವುದೇ ಪಾರ್ಟನರಶಿಪ ವ್ಯವಹಾರ ಇರಲಿಲ್ಲ, ಆದರೂ ಕೂಡ ಇಬ್ಬರೂ ಸೇರಿ ವ್ಯವಹಾರ ಮಾಡುತ್ತಿದ್ದರು, ಆದರೆ ಮಹಮ್ಮದಯೂಸೂಫ ಇಬ್ಬರೂ ಸೇರಿ ಒಟ್ಟು ಕುಟುಂಬದ ಎಲ್ಲ ವ್ಯವಹಾರಗಳನ್ನು ನೋಡಿಕೊಂಡು ಹೋಗುತ್ತಿದ್ದರು.

**16)** ಮಹಮ್ಮದಯೂಸೂಫ ಇವರು ರಾಜಕೀಯದಲ್ಲಿ ಪ್ರಭಾವಿತ ವ್ಯಕ್ತಿ ಆಗಿದ್ದರು ಅಂದರೆ ಸರಿ. ಅವರು ಹಾವೇರಿಯ ವಕ್ಫ ಅಡ್ವೈಸರಿ ಕಮೀಟಿಯ ಛೇರಮೆನ್ ಆಗಿದ್ದರು ಅಂದರೆ ಸರಿ. ಸದರಿ ಕೆಲಸವನ್ನು ಮಾಡಲು ಆಗದೇ ಇದ್ದುದರಿಂದ ಸದರಿ ಮಹಮ್ಮದಯೂಸೂಫ ರಾಜೆನಾಮೆ ಕೊಟ್ಟಿದ್ದರು . ಸದರಿ ಮಹಮ್ಮದಯೂಸೂಫ ಇವರು ರಾಜೆನಾಮೆ ಕೊಟ್ಟಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 2001 ನೇ ಇಸ್ವಿಯಲ್ಲಿ ನಮ್ಮ ಒಟ್ಟು ಕುಟುಂಬದ ಪಾರ್ಟನರಶಿಪ ವ್ಯವಹಾರದಲ್ಲಿ ಪಾಲುವಾಟ್ನಿಯಾಗಿದ್ದು, ಪಾಲುವಾಟ್ನಿಯಲ್ಲಿ ದಾವಾ ಆಸ್ತಿ ಇರಲಿಲ್ಲ ಅಂದರೆ ಸರಿ. ದಾವಾ ಆಸ್ತಿ 2006 ರಲ್ಲಿ ಆದಂತಹ ಪಾಲುವಾಟ್ನಿಯಲ್ಲಿ ಸೇರಿಸಲಾಗಿರುತ್ತದೆ. 2001 ನೇ ಇಸ್ವಿಯಲ್ಲಿ ಆದಂತಹ ಪಾಲುವಾಟ್ನಿಯಲ್ಲಿ ದಾವಾ ಆಸ್ತಿಯನ್ನು ಯಾವ

ಕಾರಣಕ್ಕಾಗಿ ಸೇರಿಸಿರಲಿಲ್ಲ ಎಂದು ನನಗೆ ಗೊತ್ತಿರುವದಿಲ್ಲ. ಸದರಿ 2001 ನೇ ಇಸ್ವಿಯಲ್ಲಿ ದಾವಾ ಆಸ್ತಿಯನ್ನು ಯಾವ ಕಾರಣಕ್ಕಾಗಿ ಸೇರಿಸಲಿಲ್ಲ ಅಂದರೆ ದಾವಾ ಆಸ್ತಿಯಲ್ಲಿ ಅಬ್ದುಲ್‌ವಹಾಬ ಮತ್ತು ಮಹಮ್ಮದಯೂಸೂಫ ಇಬ್ಬರೂ ಸೇರಿ ಅದರಲ್ಲಿ ಶಾದಿಮಹಲ್ ಕಟ್ಟಿಸಲು ಅದನ್ನು 2001 ರಲ್ಲಿ ಆದಂತಹ ಪಾಲುವಾಟ್ನಿಯಲ್ಲಿ ಸೇರಿಸಿರಲಿಲ್ಲ ಅಂದರೆ ಸರಿಯಲ್ಲ.

**17)** 2006 ನೇ ಇಸ್ವಿಯಲ್ಲಿ ಆದಂತಹ ಪಾಲುವಾಟ್ನಿಯಲ್ಲಿ ದಾವಾ ಆಸ್ತಿಯಲ್ಲಿ ಶಾದಿ ಮಹಲ್ ಕಟ್ಟಿಸಲು ಒಂದು ಜಿ.ಪಿ.ಎ ಅನ್ನು ಮಹಮ್ಮದಯೂಸೂಫ ಬರೆದುಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ. ಹಾವೇರಿಯ ನೊಂದಣಿ ಕಛೇರಿಗೆ ನಾನು ಹಾಗೂ ಮಹಮ್ಮದ ಯೂಸೂಫ ಇಬ್ಬರೂ ಸೇರಿ ಹೋಗಿದ್ದೇವು. 2006 ನೇ ಇಸ್ವಿಯಲ್ಲಿ ಅದಂತಹ ಪಾಲುವಾಟ್ನಿಯ ಪತ್ರಕ್ಕೆ ಖಲೀಲಅಹ್ಮದ ಅಬ್ದುಲ್‌ವಹಾಬ ಪಟವೇಗಾರ, ಬಾಷಾಸಾಬ ಮೆಹಬೂಬಸಾಬ ಚಲ್ಲಾಳ ಇವರು ಸಹಿ ಮಾಡಿರುತ್ತಾರೆ, ಆ ಸಮಯದಲ್ಲಿ ಪಾಲು ವಾಟ್ನಿ ಪತ್ರಕ್ಕೆ ನಾನು ಸಹಿ ಮಾಡಿರುವದಿಲ್ಲ. ನಿ.ಡಿ-3 ದಾಖಲಾತಿಯಲ್ಲಿ ಕೆ.ಎ.ಪಟವೇಗಾರ ಅಂತಾ ಅಬ್ದುಲ್‌ವಹಾಬ ಇವರ ಮಗ ಸಹಿ ಮಾಡಿಲ್ಲ ಅಂದರೆ ಸರಿಯಲ್ಲ. ಅದೇ ರೀತಿ ನಿ.ಡಿ-3 ದಾಖಲಾತಿಯಲ್ಲಿ ನದಾಫ ಎನ್ನುವ ವ್ಯಕ್ತಿ ಹಾಗೂ ಇನ್ನೊಬ್ಬ ವ್ಯಕ್ತಿ ಎಸ್.ಪಿ.ಆನವಟ್ಟಿ ಇವರು ಸಹಿ ಮಾಡಿರುತ್ತಾರೆ ಅಂದರೆ ಸರಿ.

**18)** ನಿ.ಡಿ-3 ದಾಖಲಾತಿ ಆಗುವಾಗ ಅದರಲ್ಲಿ ಬರೆದಿರುವಂತಹ ಆಸ್ತಿಯು ಅದು ಒಟ್ಟು ಕುಟುಂಬದ ಆಸ್ತಿ ಇತ್ತು ಎಂದು ಬರೆದಿಲ್ಲ ಅಂದರೆ ಸರಿಯಲ್ಲ. ನಿ.ಡಿ-3 ದಾಖಲಾತಿಯಲ್ಲಿ ಕಾಣಿಸಿದಂತಹ ಆಸ್ತಿಯ ಮೌಲ್ಯವನ್ನು ಬರೆದಿಲ್ಲ ಅಂದರೆ ಸರಿಯಲ್ಲ. ಸದರಿ ನಿ.ಡಿ-3 ದಾಖಲಾತಿಯನ್ನು ಇರುವಂತಹ ಆಸ್ತಿಯ ಒಟ್ಟು ಮೌಲ್ಯ ರೂ.10,00,000/- ಇರುತ್ತದೆ ಎಂದು ಬರೆಯಲಾಗಿದೆ ಅಂದರೆ ಸರಿ, ಆದರೆ ಅದು ಸಬರಿಜಿಸ್ಟರ ಕಛೇರಿಯಲ್ಲಿ

ಇರುವಂತಹ ರಿಜಿಸ್ಟರನಲ್ಲಿ ಕಾಣಿಸಿದಂತಹ ಆಸ್ತಿಯ ಮೌಲ್ಯ ಆಗಿರುತ್ತದೆ ಎಂದು ಸಾಕ್ಷಿಯು ನುಡಿಯುತ್ತಾರೆ. ಅಬ್ದುಲವಹಾಬ ಇವರ ಪಾಲಿಗೆ ನಿ.ಡಿ-3 ರಲ್ಲಿ ಕಾಣಿಸಿದಂತಹ ಆಸ್ತಿಗೆ ರೂ.5,00,000/- ಮೌಲ್ಯದ ಕುರಿತಾಗಿ ನೊಂದಣಿ ಕಛೇರಿ ರಿಜಿಸ್ಟರನಲ್ಲಿ ಕಾಣಿಸಿದ ಆಸ್ತಿಯ ಮೌಲ್ಯ ಬರುತ್ತದೆ. ಅದೇ ರೀತಿ ನಿ.ಡಿ-3 ದಾಖಲಾತಿಯಲ್ಲಿ ರೂ.3,30,000/- ಇದನ್ನು ಕಾಣಿಸಲಾಗಿದೆ ಅಂದರೆ ಸರಿ. ಸದರಿ ಹಣವನ್ನು ಅಬ್ದುಲ್‌ವಹಾಬ ಈತನು ಮೊದಲಿಗೆ ತೆಗೆದುಕೊಂಡು ಆ ನಂತರ ನಿ.ಡಿ-3 ದಾಖಲಾತಿಗೆ ಅಬ್ದುಲ್‌ವಹಾಬ ಈತನು ಸಾಕ್ಷಿ ನುಡಿಯುತ್ತಾರೆ.

**19)** ನಾನು ಅಬ್ದುಲವಹಾಬ ಈತನಿಗೆ ರೂ.3,00,000/- ನಿ.ಡಿ-3 ದಾಖಲಾತಿ ಬರೆಯುವಾಗ ನೊಂದಣಿ ಕಚೇರಿಯಲ್ಲಿ ಕೊಟ್ಟಿಲ್ಲ ಅಂದರೆ ಸರಿಯಲ್ಲ. ನಾನು ಅಬ್ದುಲವಹಾಬ ಈತನಿಗೆ ಮೋಸ ಮಾಡಿ ನಿ.ಡಿ-3 ದಾಖಲಾತಿಯನ್ನು ಖೊಟ್ಟಿಯಾಗಿ ಸೃಷ್ಟಿಸಿಕೊಂಡಿದ್ದೇನೆ ಅಂದರೆ ಸರಿಯಲ್ಲ. 2006 ರಲ್ಲಿ ಆದಂತಹ ಪಾಲುವಾಟ್ನಿಯಲ್ಲಿ ಬರೆದಂತಹ ಸಂಗತಿಗಳು ಸುಳ್ಳಾಗಿರುತ್ತವೆ ಅಂದರೆ ಸರಿಯಲ್ಲ. ಅದಕ್ಕೆ ಅಬ್ದುಲ್‌ವಹಾಬ ಯಾವತ್ತೂ ಕೂಡ ಸಹಿ ಮಾಡಿಲ್ಲ ಅಂದರೆ ಸರಿಯಲ್ಲ. ನಿ.ಡಿ-3 ದಾಖಲಾತಿ ಕಾನೂನು ಬಾಹಿರ ಆಗಿರುತ್ತದೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ, ಹಾವೇರಿ.